## ಸಹ್ಯಾದ್ರಿ ವಿದ್ಯಾರ್ಥಿಗೆ ಯೂತ್ ಎಸ್‌ಡಿಜಿ ಪ್ರಶಸ್ತಿ

# ಸಹ್ಯಾದ್ರಿ ಕಾಲೇಜಿಗೆ ರಾಷ್ಟ್ರೀಯ ಮನ್ನಣೆ

ಮಂಗಳೂರು: ನಗರದ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್‌ನ ಪ್ರಥಮ ವರ್ಷದ ಎಲೆಕ್ಟ್ರಾನಿಕ್ ಆಂಡ್ ಕಮ್ಯುನಿಕೇಷನ್ ವಿದ್ಯಾರ್ಥಿ ನಿಶಾಂತ್ ಗೌಡ ಅವರು ಯುನೈಟೆಡ್ ನೇಷನ್ ಡೆವಲಪ್‌ಮೆಂಟ್ ಪ್ರೋಗ್ರಾಂ ಸಹಯೋಗದೊಂದಿಗೆ ಹೈದರಾಬಾದ್‌ನಲ್ಲಿ ನಡೆದ 'ಯೂತ್ ಫಾರ್ ಎಸ್‌ಡಿಜಿ - ಸುಸ್ಥಿರ ಅಭಿವೃದ್ಧಿ ಗುರಿಗಳು' ಕಾರ್ಯಕ್ರಮದಲ್ಲಿ ಭಾಗವಹಿಸಿ ಯೂತ್ ಎಸ್‌ಡಿಜಿ ಪ್ರಶಸ್ತಿ ಗೆದ್ದಿದ್ದಾರೆ.

ಈ ಡೆವಲಪ್‌ಮೆಂಟ್ ಪ್ರೋಗ್ರಾಂಗೆ 4 ನೇ ವರ್ಷದ ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್‌ನ ವಿದ್ಯಾರ್ಥಿ ಸುನೀಲ್ ಕುಮಾರ್ ಮಾರ್ಗದರ್ಶಕರಾಗಿದ್ದರು. ನಿಶಾಂತ್ ಗೌಡರ ಈ ಯೋಜನೆಯು ಸಹ್ಯಾದ್ರಿ ಸೈನ್ಸ್ ಟ್ಯಾಲೆಂಟ್ ಹಂಟ್‌ನಲ್ಲಿ ಪ್ರಶಸ್ತಿಯನ್ನು ಗೆದ್ದಿತ್ತು. ಹೆಚ್ಚಿನ ಅಭಿವೃದ್ಧಿಗಾಗಿ ಅದೇ ಯೋಜನೆಯನ್ನು ನ್ಯೂ ಏಜ್ ಇನ್‌ಕ್ಯುಬೇಷನ್ ನೆಟ್‌ವರ್ಕ್ ಆಯ್ಕೆ ಮಾಡಿದೆ.

ನಿಶಾಂತ್ ನೆದರ್‌ಲ್ಯಾಂಡ್‌ನಲ್ಲಿ 6 ತಿಂಗಳ ಕಾಲ ಇಂಟರ್ನ್‌ಶಿಪ್ ಮಾಡಲು ಅರ್ಹತೆ ಪಡೆದಿದ್ದಾರೆ. ಇದನ್ನು ಸಿಟಿ, ಯುಎನ್‌ಡಿಪಿಯಿಂದ ಹೂಡಿಕೆದಾರರು ಪ್ರಾಯೋಜಿಸಲಿದ್ದಾರೆ. ಯೋಜನೆ ಪೂರ್ಣಗೊಂಡ ನಂತರ, ಒಂದು ಉತ್ಪನ್ನವಾಗಿ ಇದನ್ನು ವಿಶ್ವಸಂಸ್ಥೆಯು ಪ್ರಾರಂಭಿಸುತ್ತದೆ. ಸಹ್ಯಾದ್ರಿ ಸೈನ್ಸ್ ಟ್ಯಾಲೆಂಟ್ ಹಂಟ್ ವಿಜೇತರಾಗಿ ನಿಶಾಂತ್ ತಮ್ಮ ಕನಸುಗಳನ್ನು ನನಸಾಗಿಸಲು ಸಹ್ಯಾದ್ರಿ ಕಾಲೇಜನ್ನು ಆಯ್ಕೆ ಮಾಡಿದ್ದಾರೆ. ಈ ಪ್ರದೇಶದಲ್ಲಿ ಹೊಸತನವನ್ನು ಉತ್ತೇಜಿಸಲು 5 ವರ್ಷಗಳಿಂದ ಸತತವಾಗಿ ನಡೆಸುವ ಸಹ್ಯಾದ್ರಿ ಸೈನ್ಸ್ ಟ್ಯಾಲೆಂಟ್ ಹಂಟ್ ಕಾರ್ಯಕ್ರಮ ಯುವ ವಿದ್ಯಾರ್ಥಿಗಳ ಪ್ರಾಜೆಕ್ಟ್ ಮತ್ತು ಯೋಜನೆ ಫಲಪ್ರದತೆಯನ್ನು ತೋರಿಸಲು ಪ್ರಾರಂಭಿಸಿದೆ. ಇದು ಸಹ್ಯಾದ್ರಿಗೆ ಅತ್ಯಂತ ಸಂತೋಷದ ಮತ್ತು ಹೆಮ್ಮೆಯ ವಿಷಯವಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲರು ತಿಳಿಸಿದ್ದಾರೆ.




ನಿಶಾಂತ್ ಗೌಡ